ಇ) ಮೇಲ್ಕಂಡ ಅವಧಿಯಲ್ಲಿ ಕರ್ನಾಟಕ ಚಲನಚಿತ್ರ ಕೈಗಾರಿಕಾಭಿವೃದ್ಧಿ ನಿಗಮವು ಮಿನಿ ಚಿತ್ರ ಮಂದಿರಗಳನ್ನು ಕಟ್ಟಿಸಲು ಎಷ್ಟು ಹಣ ಮಂಜೂರು ಮಾಡಿದೆ.

ಈ) ಮಿನಿ ಚಿತ್ರ ಮಂದಿರಗಳಿಗೆ ಸರಿಯಾಗಿ ಹಣ ಸಹಾಯ ಮಾಡಿಲ್ಲ ಎಂದು ಸರ್ಕಾರಕ್ಕೆ ಗೊತ್ತಿದೆಯೇ?

ಉ) ಮೇಲ್ಕಂಡ ವಿಷಯದ ಬಗ್ಗೆ ಸರ್ಕಾರ ಯಾವ ನಿಲುವನ್ನು ತೆಗೆದುಕೊಂಡಿದೆ?

ಶ್ರೀ ಎಂ.ಪಿ. ಪ್ರಕಾಶ್ (ವಾರ್ತಾ,ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಮಿನಿ ಚಿತ್ರಮಂದಿರಗಳಿಗೆ ಲೈಸೆನ್ಸ್‌ನ್ನು ನೀಡುವ ಅಧಿಕಾರ ನಿಗಮಂದ ವ್ಯಾಪ್ತಿಗೆ ಬರುವುದಿಲ್ಲ.

ಇ) ೧೦ ಮಿನಿ ಚಿತ್ರ ಮಂದಿರಗಳಿಗಾಗಿ ೨೬,೯೨,೬೧೦-೦೦ ರೂ.ಗಳನ್ನು ಮಂಜೂರು ಮಾಡಿದೆ.

ಈ) ಹೌದು.

ಉ) ಕರ್ನಾಟಕ ಚಲನಚಿತ್ರ ಕೈಗಾರಿಕಾಭಿವೃದ್ಧಿ ನಿಗಮವು ರಾಷ್ಟ್ರೀಯ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ—ಬಾಂಬೆ ಇವರೊಂದಿಗೆ ಈ ವಿಷಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ವ್ಯವಹರಿಸುತ್ತಿದೆ.

ಬಳ್ಳಾರಿಯಲ್ಲಿರುವ ಶಾದಿ ಮಹಲ್ ಕಟ್ಟಲು ನಿವೇಶನ ಮಂಜೂರಾತಿ ಬಗ್ಗೆ

೧೪೭೦. ಶ್ರೀ ಎಂ. ರಾಮಪ್ಪ(ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ನಗರದ ಮುಸ್ಲಿಂ ಜನಾಂಗದವರು ಶಾದಿ ಮಹಲ್ ಕಟ್ಟಡಕ್ಕೆ ನಿವೇಶನ ಮಂಜೂರು ಮಾಡಲು ಮನವಿಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಿವೇಶನ ಮಂಜೂರು ಮಾಡುವ ವಿಚಾರದಲ್ಲಿ ಸರ್ಕಾರದವರು ಯಾವ ರೀತಿಯಲ್ಲಿ ಕ್ರಮ ಕೈಗೊಂಡಿದ್ದಾರೆಯೇ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಗಮನ ಸೆಳೆಯುವ ಸೂಚನೆಗಳು

ಬಾಳೆಹೊನ್ನೂರಿನ ಕಾಫೀ ಸಂಶೋಧನಾ ಕೇಂದ್ರದಲ್ಲಿ ಲಯಸನ್ ಆಫೀಸರ್ ಆಗಿದ್ದ ಎಸ್.ಪಿ. ಸುಬ್ರಮಣ್ಯಂ ಅವರು ಕೊಲೆಯಾಗಿರುವ ಬಗ್ಗೆ

ಶ್ರೀ ಎಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಶೃಂಗೇರಿ ಕ್ಷೇತ್ರದ ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದಲ್ಲಿ ಸೀನಿಯರ್ ಲಯಸನ್ ಆಫೀಸರ್ ಆಗಿದ್ದ ಶ್ರೀ ಎನ್. ಪಿ. ಸುಬ್ರಹ್ಮಣ್ಯಂ ಎಂಬುವವರನ್ನು ದಿನಾಂಕ ೯-೧೧-೮೭ರಂದು ಅಲ್ಲಿಗೆ ಅಸ್ಸಾಂನಿಂದ ತರಬೇತಿ ಪಡೆಯಲು ಬಂದಿದ್ದ ಶ್ರೀ ದಿವ್ಯಜ್ಯೋತಿ ಬರೂವ ಎಂಬುವವರು ಚೂರಿಯಿಂದ ಇರಿದು ಕೊಲೆ ಮಾಡಿರುವ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ಚಿಣಕಾಸಂ ಹಾಗೂ ಬಂದೀಖಾನೆ ರಾಜ್ಯ ಸಚಿವರು).—ಮಾನ್ಯ ಸದಸ್ಯರು ಗಮನ ಸೆಳೆದಿರುವ ಸೂಚನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ,

ದಿನಾಂಕ ೯–೧೧–೧೯೮೮ರಂದು ಬಾಳೆಹೊನ್ನೂರಿನ ಕಾಫಿ ಸಂಶೋಧನಾ ಕೇಂದ್ರದಲ್ಲಿ ಲೈಬ್ರರಿಯನ್ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಶ್ರೀ ಎಸ್. ಪಿ. ಸುಬ್ರಮಣ್ಯಂರವರನ್ನು ಅಸ್ಸಾಂ ರಾಜ್ಯದ ದೇವಜ್ಯೋತಿ ಬರೂವ, ೧೯ ವರ್ಷ ವಯಸ್ಸಿನ, ತರಬೇತಿಗಾಗಿ ಬಂದಿದ್ದ ಅಭ್ಯರ್ಥಿಯಿಂದ ಕೊಲ್ಲಲ್ಪಟ್ಟಿರುತ್ತಾರೆ. ಆರೋಪಿ ದೇವಜ್ಯೋತಿ ಬರೂವನನ್ನು ಪೋಲೀಸ್‌ರವರು ದಸ್ತಗಿರಿ ಮಾಡಿ, ಆರೋಪಿಯ ಮೇಲೆ ದೋಷಾರೋಪದ ಪಟ್ಟಿಯನ್ನು ಮೊಕದ್ದಮೆ ಸಂಖ್ಯೆ ಎಸ್.ಸಿ. ೧೧/೮೮ರಲ್ಲಿ ಚಿಕ್ಕಮಗಳೂರಿನ ಜಿಲ್ಲಾ ಸೆಷನ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ. ನ್ಯಾಯಾಲಯವು ದಿನಾಂಕ ೨೧–೫–೧೯೮೮ರಂದು ವಿಚಾರಣೆಗೆ ನಿಗದಿ ಮಾಡಲಾಗಿತ್ತು. ಈ ಮಧ್ಯೆ ಆರೋಪಿಯನ್ನು ವೈದ್ಯಕೀಯ ಕಾರಣಗಳಿಂದ ಜಾಮೀನಿನ ಮೇಲೆ ಬಿಡುಗಡೆಗೆ ಪಾಕಿಕೊಂಡಿದ್ದ ಅರ್ಜಿಯನ್ನು ನರಸಿಂಹರಾಜಪುರದ ಪ್ರಥಮ ದರ್ಜೆ ನ್ಯಾಯಾಧೀಶರು ತಿರಸ್ಕರಿಸಿದರು. ಆದಾಗ್ಯೂ ನ್ಯಾಯಾಲಯವು ಬೆಂಗಳೂರಿನ ನಿಮಾನ್ಸ್‌ನಲ್ಲಿ ವೈದ್ಯಕೀಯ ಉಪಚಾರ ಪಡೆಯಲು ಆದೇಶಿಸಿದರು. ಮತ್ತು ಈತನು ದಿನಾಂಕ ೪–೧೧–೧೯೮೮ ರಿಂದ ೯–೧೧–೧೯೮೮ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾನೆ. ವೈದ್ಯಾಧಿಕಾರಿ ವರದಿ ಪ್ರಕಾರ ಆರೋಪಿಗೆ ಫಿಟ್ಸ್ ಕಾಯಿಲೆ ಭಾದೆಯಿಂದ ನರಳುತ್ತಿದ್ದಾನೆ, ಮತ್ತು ನಿಮಾನ್ಸ್ ವರದಿ ಪ್ರಕಾರ ಸದರಿ ಆರೋಪಿಯು ಹೊಸದೆಹಲಿಯ ಎ.ಐ.ಐ.ಎಂ.ಎಸ್.ನ ನ್ಯೂರೋಲಜಿ ಪ್ರೊಫೇಸರ್ ಡಾ. ಮಹೇಶ್ವರಿಯವರಿಂದ ಹಿಂದಿನಿಂದ ಚಿಕಿತ್ಸೆ ಪಡೆಯುತ್ತಿದ್ದು, ಆತನನ್ನು ಅಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲು ಆರೋಪಿಯ ತಂದೆಯವರ ಕೋರಿಕೆಯನ್ನು ಪರಿಗಣಿಸ ಬಹುದೆಂದು ಸೂಚಿಸಿರ್ದಾರೆ.

ನಂತರ ಸದರಿ ಆಪಾದಿತನ ತಂದೆ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಅರ್ಜಿಯ ಸಂಖ್ಯೆ. ೬೮೮/೮೮ನ್ನು ಸಲ್ಲಿಸಿರುತ್ತಾರೆ. ಮತ್ತು ನ್ಯಾಯಾಲಯವು ದಿನಾಂಕ ೧೮–೪–೧೯೮೮ರಂದು ಈ ಕೆಳಕಂಡತೆ ಆದೇಶಿಸಿದೆ.

ಆರೋಪಿಯನ್ನು ನಿಮಾನ್ಸ್‌ನಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಅಲ್ಲಿನ ನಿಮಾನ್ಸ್‌ನ ಅಧಿಕಾರಿಗಳು ಮೂರು ಸಲ ಸದರಿ ಆರೋಪಿಯನ್ನು ಹೊಸದೆಹಲಿಯ ಎ.ಐ.ಐ.ಎಂ.ಎಸ್.ನಲ್ಲಿ ಚಿಕಿತ್ಸೆಗಾಗಿ ಕಳುಹಿಸಲು ಸೂಚಿಸಿರುತ್ತಾರೆ. ಆದರಂತೆ ಆತನನ್ನು ಬೇಲ್ ಮೇಲೆ ಬಿಡುಗಡೆ ಮಾಡಲು ನಿರಾಕರಿಸುತ್ತಾರೆ.

ಒಂದು ವೇಳೆ ಅಂತಹ ಸೌಕರ್ಯಗಳು ನಿಮಾನ್ಸ್‌ನಲ್ಲಿ ಲಭ್ಯವಿಲ್ಲದ ಪಕ್ಷದಲ್ಲಿ ಹೊಸ ದೆಹಲಿ ಎ.ಐ.ಐ.ಎಂ.ಎಸ್,ನಲ್ಲಿ ಚಿಕಿತ್ಸೆಯನ್ನು ಪೋಲೀಸ್ ಬಂದೋಬಸ್ತಿನಲ್ಲಿ ಪಡೆಯಬಹುದೆಂದು ತಿಳಿಸಿದೆ.

ಶ್ರೀ ಪ್ರೇಮ ಬರೂವರವರ ಮನವಿಗಳ ಮೇರಿಗೆ ಕಾರಾಗೃಹಗಳ ಮಹಾ–ನಿರೀಕ್ಷಕರು ಮತ್ತು ನಿಮಾನ್ಸ್‌ನ ನಿರ್ದೇಶಕರುಗಳ ಅಭಿಪ್ರಾಯಗಳನ್ನು ಕೋರಲಾಗಿತ್ತು. ನಿಮಾನ್ಸ್‌ನ ನಿರ್ದೇಶಕರು ತಮ್ಮ ಪತ್ರ ದಿನಾಂಕ ೨೩–೪–೧೯೮೮ರಲ್ಲಿ ಬೆಂಗಳೂರು ಹಿರಿಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಇವರಿಗೆ, ನಿಮಾನ್ಸ್ ವೈದ್ಯಾಧಿಕಾರಿಗಳು ಸದರಿ ಆರೋಪಿ ರೋಗಿಗೆ ನವದೆಹಲಿಯ ಎ ಐ.ಐ.ಎಂ ಎಸ್. ನಲ್ಲಿ ಚಿಕಿತ್ಸೆ ಪಡೆಯಲು ವರ್ಗಾಯಿಸುವುದೆಂದು ಈಗಾಗಲೇ ತಿಳಿಸಿರುತ್ತಾರೆಂದೂ, ಆದಾಗ್ಯೂ ನಿಮಾನ್ಸ್‌ನ ನಿರ್ದೇಶಕರು ಇಂತಹ ರೋಗಿಗಳನ್ನು ಚಿಕಿತ್ಸೆಪಡಿಸಲು ನವದೆಹಲಿ ಎ.ಐ.ಐ.ಎಂ.ಎಸ್. ದಂಥ ಎಲ್ಲಾ ಸೌಲಭ್ಯಗಳನ್ನು ಹೊಂದಿರುತ್ತದೆಯೂ ಆದರೂ ಮಾನವೀಯತೆಯ ದೃಷ್ಟಿಯಿಂದ ಹಾಗೂ ರೋಗಿಯ ತಂದೆಯವರು ಆರ್ಥಿಕವಾಗಿ ಅನುಕೂಲವಂತರಾಗಿರುವುದರಿಂದ ನಿಯಮಾವಳಿಯ ಪ್ರಕಾರ ವರ್ಗಾಯಿಸಲು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ ಕಾರಾಗೃಹಗಳ ಮಹಾನಿರೀಕ್ಷಕರು ವಿಚಾರಣಾಧೀನ ಖೈದಿಯನ್ನು (ಯು.ಟಿ.ಪ್ರಿಸನರ್) ಬೆಂಗಳೂರಿನ ನಿಮಾನ್ಸ್‌ನಿಂದ ನವದೆಹಲಿಯ ಎ.ಐ.ಐ.ಎಂ.ಎಸ್.ನಲ್ಲಿ ಚಿಕಿತ್ಸೆ ಪಡೆಯಲು ಕರ್ನಾಟಕ ಖೈದಿ ಕಾಯ್ದೆ ೧೯೬೩ ವಿಧಿ ೯(೪)ರ ಅಡಿಯಲ್ಲಿ ಯೂನಿಯನ್ ಟೆರಿಟೋರಿ, ಹೊಸದೆಹಲಿರವರ ಅಧಿಕಾರಿಗಳ ಅನುಮತಿ ಪಡೆದು ವರ್ಗಾಯಿಸಲು ಸೂಚಿಸಿರುತ್ತಾರೆ.

ಅದರಂತೆ ಕಾರ್ಯದರ್ಶಿ, ಕೇಂದ್ರಾಡಳಿತ ಪ್ರದೇಶ ದೆಹಲಿರವರಿಗೆ ಸರ್ಕಾರಿ ಪತ್ರ ದಿನಾಂಕ ೨೯-೪-೧೯೮೮ರಲ್ಲಿ ಕೇಂದ್ರಾಡಳಿತದ ಸಮ್ಮತಿಯನ್ನು ಕೋರಲಾಯಿತು. ಅದೇ ದಿನ ವೈರ್‌ಲೆಸ್ ಮೆಸೇಜ್ ಸಹ ಹೊರಡಿಸಲಾಯಿತು. ನಂತರ ದಿನಾಂಕ ೩-೫-೧೯೮೮ರಂದು ವಿಚಾರಣಾಧೀನ ಖೈದಿಯಾದ (ಯು.ಟಿ. ಪ್ರಿಸನರ್) ಶ್ರೀ ದೇವಜ್ಯೋತಿಗೆ ನವದೆಹಲಿಯ ಎ.ಐ.ಐ.ಎಂ.ಎಸ್.ಗೆ ವರ್ಗಾಯಿಸಲು ಆದೇಶವನ್ನು ಕರ್ನಾಟಕ ಖೈದಿ ಕಾಯ್ದೆ ೧೯೭೨ರ ವಿಧಿ ೯(೪)ರ ಅಡಿಯಲ್ಲಿ ಪ್ರಧಾನವಾದ ಅಧಿಕಾರ ಚಲಾಯಿಸಿ ಎಸ್.ಟಿ. ರಾಜ್ಯಪಾಲರ ಕೇಂದ್ರಾಡಳಿತ ಪ್ರದೇಶ ದೆಹಲಿರವರ ಅನುಮತಿಯನ್ನು ನಿರೀಕ್ಷಿಸುತ್ತಾ ಕಾರಾಗೃಹಗಳ ಮಹಾನಿರೀಕ್ಷಕರಿಗೆ ಸದರಿ ಖೈದಿಯನ್ನು ನಿಯಮಾವಳಿಯ ಪ್ರಕಾರ ವರ್ಗಾಯಿಸಲು ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

ಒಳಾಡಳಿತ ಕಾರ್ಯದರ್ಶಿ ದೆಹಲಿ ಆಡಳಿತ, ದೆಹಲಿರವರು ತಮ್ಮ ಟೆಲೆಕ್ಸ್ ಮೆಸೇಜ್ ದಿನಾಂಕ ೭-೫-೧೯೮೮ರಂದು ವಿಚಾರಣಾಧೀನ ಖೈದಿಯನ್ನು ಬೆಂಗಳೂರಿನ ನಿಮಾನ್ಸ್‌ನಿಂದ ಚಿಕಿತ್ಸೆಗಾಗಿ ಪೋಲೀಸ್ ಬಂದೋಬಸ್ತಿನಲ್ಲಿ ವರ್ಗಾಯಿಸಲು ಅನುಮತಿ ಕೊಟ್ಟಿರುತ್ತಾರೆ. ವಿಚಾರಣಾಧೀನ ಖೈದಿ ಶ್ರೀ ದೇವಜ್ಯೋತಿ ಬರೂಪನ್ನು ದಿನಾಂಕ ೧೬-೫-೧೯೮೮ ರಿಂದ ೧೭-೫-೧೯೮೮ರಂದು ಪೋಲೀಸ್ ಬಂದೋಬಸ್ತಿನೊಂದಿಗೆ ದೆಹಲಿಗೆ ಕಳುಹಿಸಿರುವ ಬಗ್ಗೆ ವರದಿ ಬಂದಿರುತ್ತದೆ,

ಇತ್ತೀಚೆಗೆ ದಿವಂಗತ ಎಸ್. ಬಿ. ಸುಬ್ರಮಣ್ಯಂ, ಲೈಯರ್ಸನ್ ಅಧಿಕಾರಿಯವರ ತಂದೆ ಶ್ರೀ ಎಸ್. ಎ. ಪದ್ಮನಾಭಯ್ಯರವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರಿ ಆದೇಶ ಹೆಚ್.ಡಿ. ೪ ಪಿಆರ್‌ಜಿ ೮೮, ದಿನಾಂಕ ೩-೫-೧೯೮೮ರ ವಿರೋಧವಾಗಿ ರಿಟ್ ಅರ್ಜಿ ಸಂಖ್ಯೆ ೭೪೨೩/೮೮ನ್ನು ಸಲ್ಲಿಸಿ, ಸದರಿ ಆದೇಶವನ್ನು ರದ್ದುಗೊಳಿಸಲು ಕೋರಿದ್ದಾರೆ ಸದರಿ ರಿಟ್ ಅರ್ಜಿಯು ದಿನಾಂಕ ೧೬-೫-೧೯೮೮ರಂದು ಆದೇಶಕ್ಕಾಗಿ ಬಂದಿದ್ದು, ಉಚ್ಚ ನ್ಯಾಯಾಲಯವು ಆಕ್ಷೇಪಣಾ ಪಟಿಯನ್ನು ಎರಡು ವಾರದೊಳಗೆ ಸಲ್ಲಿಸಲು ಸೂಚಿಸಿದೆ. ಶ್ರೀ ಎಸ್ ಎ, ಪದ್ಮನಾಭಯ್ಯರವರು ದಿನಾಂಕ ೧೭-೫-೧೯೮೮ರಂದು ನನಗೆ ಮನವಿಯನ್ನು ಸಲ್ಲಿಸಿದ್ದಾರೆ. ಮತ್ತು ಅದಂ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಎ. ಪದ್ಮನಾಭಯ್ಯರವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು ಈ ವಿಷಯ ನ್ಯಾಯಾಲಯದಲ್ಲಿರುವುದರಿಂದ ಅದರ ತೀರ್ಪನ್ನು ನಿರೀಕ್ಷಿಸಬಹುದು,

ಶ್ರೀ ಎಚ್. ಜಿ. ಗೋವಿಂದೇ ಗೌಡ.--ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕ ವಿಷಯವಾಗಿರುವುದರಿಂದ ತಮ್ಮ ಮುಂದೆ ಇದನ್ನು ಹೇಳುತ್ತಿದ್ದೇನೆ. ೨೦ನೇ ತಾರೀಖು ೩೩ನೇ ನಿಯಮದ ಪ್ರಕಾರ ನಾನು ಸರ್ಕಾರದ ಗಮನ ಸೆಳೆದಿದ್ದೆ. ಆದಕ್ಕೆ ಸರಿಯಾದ ಉತ್ತರ ಬಂದಿರಲಿಲ್ಲ. ಆದ್ದರಿಂದ ಮತ್ತೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಪೋಲೀಸ್ ಇಲಾಖೆಯಲ್ಲಿ ಉತ್ತಮವಾಗಿರತಕ್ಕ ಕೆಲಸ ಮಾಡಿದ್ದಾರೆ. ಕೂಡಲೇ ಹಿಡಿದು, ಅರೆಸ್ಟ್ ಮಾಡಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ನನಗೆ ಅನುಮಾನ ಬಂದಿರತಕ್ಕದ್ದು ಇಡೀ ದಕ್ಷಿಣ ಭಾರತದಲ್ಲಿ ಉತ್ತಮವಾಗಿರತಕ್ಕ ನಿಮಾನ್ಸ್ ಆಸ್ಪತ್ರೆ ಬೆಂಗಳೂರಿನಲ್ಲಿದೆ. ಹೀಗಿದ್ದರೂ ಡೆಲ್ಲಿಗೆ ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ಏನಿತ್ತು ಎಂಬುದು ನನ್ನ ಮನಸ್ಸಿನಲ್ಲಿರತಕ್ಕ ಚಿಂತನೆ. ಇಲ್ಲಿ ಆವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಅರ್ಜಿ ಕೊಟ್ಟಿದ್ದಾರೆ. ಸುಬ್ರಹ್ಮಣ್ಯಂ ಅವರ ತಂದೆ ಇಲ್ಲೇ ಇದ್ದರೆ ಪೋಲೀಸ್ ಇನ್‌ವೆಸ್ಟಿಗೇಷನ್‌ಗೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಕರ್ನಾಟಕ ರಾಜ್ಯದಿಂದ ಹೊರಗಡೆ ಕಳುಹಿಸಿದರೆ ಮುಂದೆ ನಡೆಯತಕ್ಕ ಇನ್‌ವೆಸ್ಟಿಗೇಷನ್‌ಗೆ ತೊಂದರೆಯಾಗುತ್ತದೆಂದು ಅರ್ಜಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಇವರನ್ನು ಹೊರಗಡೆ ಕಳುಹಿಸುವುದು ಬೇಡವೆಂದು ಆರ್ಡರ್ ಮಾಡಿದ್ದಾರೆ, ಮುಖ್ಯ ಮಂತ್ರಿಗಳ ಆದೇಶ ಇವರಿಗೆ ಬರುವುದರೊಳಗೆ ಹೊರಗಡೆ ಕಳುಹಿಸುವುದಕ್ಕೆ ಗೃಹ ಖಾತೆಯವರು ಆಜ್ಞೆ ಹೊರಡಿಸತಕ್ಕ ಔಚಿತ್ಯ ಏನು? ಈ ರೀತಿ ಹೊರಗಡೆ ಕಳುಹಿಸಿದರೆ ನಿಜಾಂಶ ಏನು ಎಂಬುದು ಜನರಿಗೆ ತಿಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ನಮ್ಮ ರಾಜ್ಯದಲ್ಲಿ ಕೇಸನ್ನು ವಿಲೇವಾರಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಹೊರಗಡೆ ಇನ್ನೊಂದು ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟಿಗೆ ಕರೆದುಕೊಂಡು ಹೋದರೆ ಕೇಸನ್ನು ವಿಚಾರಣೆ ಮಾಡುವುದಕ್ಕೆ ತೊಂದರೆಯಾಗುವುದಿಲ್ಲವೆ?

ಶ್ರೀ ಐ. ಬಿ. ಶಂಕರ್.—ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿ ಈ ದುರ್ಘಟನೆ ನಡೆದಾಗ ಅತನ ತಂದೆತಾಯಿಗಳು ನಮ್ಮೆಲ್ಲರನ್ನೂ ಭೇಟಿಯಾಗಿ ಕೇಳಿದಾಗ ಪೋಲೀಸರಿಂದ ನ್ಯಾಯವಾದ ತನಿಖೆ ಆಗಬೇಕೆಂದು ಹೇಳಿದಾಗ ಪೊಲೀಸರು ಬಹಳ ಉತ್ತಮವಾದ ಕೆಲಸ ಮಾಡಿ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಬಾಕಿ ವಿಷಯಗಳನ್ನು ಶ್ರೀ ಗೋವಿಂದೇಗೌಡ ಅವರು ತಮ್ಮ ಗಮನಕ್ಕೆ ತಂದಿದ್ದಾರೆ. ಆದರೆ ಆಸ್ಪಾಮಿನ ಸೆಕ್ರೆಟರಿಯೇಟ್‌ನಲ್ಲಿ ಅವರ ತಂದೆ ಉತ್ತಮ ಲೆವೆಲ್‌ನ ಪ್ರಭಾವಶಾಲಿ ಅಧಿಕಾರಿಯಾಗಿರುವುದರಿಂದ, ಕರ್ನಾಟಕದ ಅಧಿಕಾರಿಗಳನ್ನು ಅವರ ಮನವೊಲಿಸಿಕೊಂಡುಬಿಟ್ಟು ಏನಾದರೂ ರಾಜಕೀಯ ನಡೆದಿದೆಯೋ ಏನೋ ಎನ್ನುವ ಅನುಮಾನ ನಮ್ಮಲ್ಲಿ ಬಂದಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಕಾರಣಕ್ಕೆ ಸೌತ್ ಇಂಡಿಯಾದಲ್ಲಿ ಅಷ್ಟೇ ಏಕೇ ಇಡೀ ಏಷ್ಯಾ ಖಂಡದಲ್ಲೇ ಅತ್ಯುತ್ತಮವಾದ ಆಸ್ಪತ್ರೆಯೆನಿಸಿರುವ ನಿಮಾನ್ಸ್ ಬೆಂಗಳೂರಿನಲ್ಲಿದೆ ಇಡೀ ಭಾರತ ದೇಶದ ಮೂಲೆಮೂಲೆಯಿಂದ ಅನೇಕ ಕೇಸ್‌ಗಳು ಇಲ್ಲಿಗೆ ರೆಫರ್ ಆಗುತ್ತದೆ. ಬಹಳ ಉತ್ತಮವಾದ ನಿಮಾನ್ಸ್ ಆಸ್ಪತ್ರೆ ನಮ್ಮ ಕರ್ನಾಟಕದ್ದು. ಇಂತಹ ಸಂದರ್ಭ ಇರುವಾಗ ಇಷ್ಟು ಉತ್ತಮವಾದ ಸೌಲಭ್ಯ ಇದ್ದರೂ ಉದ್ದೇಶ ಪೂರಕವಾಗಿ ಅವರನ್ನು ಅಲ್ಲಿಗೆ ಕಳಿಸಿಕೊಡುವ ಉದ್ದೇಶ ಏನು ಎಂದರೆ ಈ ಕೇಸನ್ನು ಮುಚ್ಚಿಡುವ ಪ್ರಯತ್ನ ಮೇಲಿನ ಅಧಿಕಾರಿಗಳಿಂದ ನಡೆಯುತ್ತಿರುವುದು ನಮಗೆ ಬಹಳ ಸ್ಪಷ್ಟವಾಗಿ ಅರ್ಥವಾಗುತ್ತಿದೆ, ಮಾನ್ಯ ಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಅವರ ತಂದೆತಾಯಿಗಳು ಮಗನನ್ನು ಕಳೆದುಕೊಂಡು ನ್ಯಾಯ ಸಿಕ್ಕಲ್ಲವೆಂದು ದಿನಪೂ ಪ್ರತಿಯೊಬ್ಬ ಮಂತ್ರಿಗಳ ಮನೆಗಳಿಗೆ ಅಲೆಯುತ್ತಿದ್ದಾರೆ. ಶಾಸಕರನ್ನೂ ಕೂಡ ಅವರು ಭೇಟಿ ಮಾಡುತ್ತಿದ್ದಾರೆ. ಇವತ್ತಿನ ದಿವಸ ಅವರು ಕಣ್ಣೀರಲ್ಲಿ ಕೈತೊಳೆಯುತ್ತಿರುವಷ್ಟಕ್ಕಂತೂ ಕಾಲದಲ್ಲಿ ಸರ್ಕಾರದಿಂದ ಅನ್ಯಾಯ ಆಯಿತು ಎನ್ನುವ ಭಾವನೆ ಅವರ ತಂದೆತಾಯಿಗಳಿಗೆ ಬರುವುದು ಬೇಡ. ನಮ್ಮ ಅಧಿಕಾರಿಗಳು ಏನು ದುರುದ್ದೇಶದಿಂದ ಅವರನ್ನು ಕಳಿಸಿಕೊಟ್ಟುಅವರಿಗೆ ಸಹಕಾರ ಕೊಡುವ ಪ್ರಯತ್ನ ಏನು ಆಗುತ್ತಿದೆಯೋ ಅದನ್ನು ಕೂಡಲೆ ರದ್ದುಪಡಿಸಿ ಅವರನ್ನು ಅಲ್ಲಿಂದ ವಾಪಸ್ಸು ಬರುವಂತೆ ಮಾಡಿ ಆ ತಂದೆತಾಯಿಗಳೇನು ಸರ್ಕಾರಕ್ಕೆ ಮೊರೆ ಇಟ್ಟಿದ್ದಾರೆ, ಅವರ ಕಣ್ಣೀರನ್ನು ಒರೆಸುವ ಪ್ರಯತ್ನವನ್ನು ತಾವು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಇದನ್ನು ಮಾಡದೇ ಹೋದರೆ ಇಲ್ಲಿ ನ್ಯಾಯ ಸಿಗದಿರುವುದಿಲ್ಲ, ಅಧಿಕಾರಿಗಳು ಏನು ಮಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಎಲ್ಲರಿಗೂ ಬರುತ್ತದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ವೀರಣ್ಣ.—ಶ್ರೀ ಗೋವಿಂದೇಗೌಡರು ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಜಿಕೊಟ್ಟರು. ಕೊಟ್ಟಮೇಲೆ ಕೂಡ ಅವರನ್ನು ಅಲ್ಲಿಗೆ ಕಳಿಸಿಕೊಡುವ ಅವಶ್ಯಕತೆ ಏನಿತ್ತು ಎಂದು ಕೇಳಿದ್ದಾರೆ. Transier of the undertrial was made on 3-5-88 Application by the father of the deceased was made on 17-5-88 and by the time application was given to the Chief Minister he had already preferred the writ, ಇದು ರಿಟ್ ಆಗಿರತಕ್ಕಂಥದ್ದು to quash order passed on 3-5-88 transferring the unyer trial from Bangalore to Delhi. ಈ ರೀತಿ ಇರಬೇಕಾದರೆ ಅದು ಎರಡು ವಾರದಲ್ಲಿ ನಮಗೆ ಅಬೆಕ್ಷನ್ ಫೈಲ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಈಗಾಗಲೇ ನಾವು ಅಬೆಕ್ಷನ್ ಅನ್ನು ಫೈಲ್ ಮಾಡಿದ್ದೇವೆ. ೧೬-೫-೮೮ರಲ್ಲಿ ಕೋರ್ಟಿನಲ್ಲಿ ಏನು ಆಗುತ್ತದೆ. ಕೋರ್ಟಿನಲ್ಲಿ ಕ್ವಾಶ್ ಮಾಡಿತು ಎಂದರೆ ಅತನನ್ನು ಇಲ್ಲಿಗೆ ಕರೆದುಕೊಂಡು ಬರಬೇಕಾಗುತ್ತದೆ. ಇಲ್ಲಿ ನಿಮಾನ್ಸ್‌ನಲ್ಲಿ ಎಲ್ಲಾ ಸೌಲಭ್ಯಗಳು ಇದ್ದರೂ ಅಲ್ಲಿಗೆ ಏಕೆ ಕರೆದುಕೊಂಡು ಹೋಗಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಎಲ್ಲಾ ಸೌಲಭ್ಯ ಇದ್ದರೂ ಸಹ ಮಾನವೀಯತೆ ದೃಷ್ಟಿಯಿಂದ ಮತ್ತು ಅವರ ತಂದೆ ಆಸ್ಪಾಮಿನವರಾಗಿದ್ದರಿಂದ ಅವರನ್ನು ಕಳಿಸಿಕೊಡಬಹುದು ಎಂಬ ಸೂಚನೆಯನ್ನು ನಿಮಾನ್ಸ್‌ನ ಡೈರೆಕ್ಟರ್ ಅವರು ಕೊಟ್ಟಿದ್ದರ ಮೇಲೆ ಕಾನೂನು ಪ್ರಕಾರ ಈ ಕ್ರಮವನ್ನು ತೆಗೆದುಕೊಂಡಿದ್ದೇವೆಯೇ ಹೊರತು ಬೇರೆ ಯಾವುದೇ ಒಂದು ದುರುದ್ದೇಶದಿಂದ ಅಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಐ. ಬಿ. ಶಂಕರ್.—ಕೋರ್ಟಿನಲ್ಲಿ ರಿಟ್ ಪಿಟಿಶನ್ ಹಾಕಿದಮೇಲೆ ಅದು ಬರುವವರೆಗೆ ಕಾಯುವ ಸೌಜನ್ಯವನ್ನು ಏಕೆ ತೋರಿಸಲಿಲ್ಲ? ಕೋರ್ಟಿನಲ್ಲಿ ರಿಟ್ ಪಿಟಿಶನ್ ಹಾಕಿದ್ದು ತಮಗೆ ಗೊತ್ತಿದೆ. ಮಾನವೀಯ ದೃಷ್ಟಿಯಿಂದು ತಾವು ಹೇಳುತ್ತಿದ್ದೀರಿ. ಮಗನನ್ನು ಕಳೆದುಕೊಂಡ ತಂದೆ

ತಾಯಿಗಳ ಬಗ್ಗೆ ನಿಮಗೆ ಏಕೆ ಮಾನವೀಯತೆ ದೃಷ್ಟಿ ಬರಲಿಲ್ಲ? ಕೊಲೆಗಾರನ ತಂದೆತಾಯಿಗಳ ಬಗ್ಗೆ ಮಾನವೀಯತೆ ದೃಷ್ಟಿಯನ್ನು ತೋರಿಸಿದಿರಿ ಅವರು ಪಾಪ, ದುಡಿಯುವ ಸ್ವಂತ ಮಗನನ್ನು ಕಳೆದುಕೊಂಡವರಿಗೆ ನ್ಯಾಯ ಸಿಗುತ್ತಿಲ್ಲ ಮಂಚ್ಚಿಡಂವ ಪ್ರಯತ್ನ ನಡೆಯುತ್ತಿದೆ ದಯವಿಟ್ಟು ಕೊಡಬೇಡಿ ಎಂದು ಕೇಳಿದ್ದಾಗ. ನೀವು ಕೋರ್ಟಿನಿಂದ ಏನು ತೀರ್ಮಾನ ಬರಂತ್ತದೆ ಅಲ್ಲಿಯವರೆಗೆ ಕಾಯಬಹುದಿತ್ತು. ಅಧಿಕಾರಿಗಳಿಗೆ ಅಷ್ಟು ಅರ್ಜೆಂಟ್ ಏನಿತ್ತು?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಅಧ್ಯಕ್ಷರೇ, ಅವರನ್ನು ಕರ್ನಾಟಕದಿಂದ ಹೊರಗಡೆ ಕಳಿಸದೇ ಇದ್ದಹಾಗೆ ಇಲ್ಲೇ ಉಳಿಸಿಕೊಳ್ಳಬೇಕೆಂದು ೧೭–೫–೧೯೮೮ ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆಂದು ಹೇಳಿದ್ದಾರೆ, ಆದರೆ ಸರ್ಕಾರಿ ಆಜ್ಞೆ ೩–೫–೧೯೮೮ಕ್ಕೆ ಆಯಿತು ಎಂದು ತಿಳಿಸಿದಿರಿ. ಅಂದರೆ ಯಾವ ದಿವಸ ಈತನನ್ನು ಹೊರಗಡೆ ಕಳಿಸಿದ್ದಾರೆ ? ಯಾವ ದಿವಸ ಕರ್ನಾಟಕ ರಾಜ್ಯದಿಂದ ಅಸ್ಸಾಮಿಗೆ ಕಳಿಸಿದರು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಎರಡನೆಯದು, ಯಾವುದೇ ಮರ್ಡರ್ ಕೇಸ್ ಆದಾಗ ಮಾನವೀಯ ದೃಷ್ಟಿ ಬರುತ್ತದೆ ಎಂದು ಹೇಳಿದರೆ ನಾನು ಅದನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ. ಯಾರು ನಿಜವಾಗಿ ಮರ್ಡರ್ ಮಾ ಡ್ದಾನೆ. ಆತನಿಗೆ ಕಠಿಣವಾದ ಶಿಕ್ಷೆ ಆಗಬೇಕೆನ್ನುವುದು ಪ್ರತಿಯೊಬ್ಬರ ಅಪೇಕ್ಷೆಯಾಗಿರುತ್ತದೆ. ಇಲ್ಲಿ ಮಾನವೀಯ ದೃಷ್ಟಿ ಎಲ್ಲಿ ಬರುತ್ತದೆ? ಹೀಗಿದ್ದೂ ಆತನನ್ನು ಹೊರಗಡೆ ಕಳಿಸಿರತಕ್ಕದ್ದನ್ನು ನೋಡಿದಾಗ ಇದರಲ್ಲಿ ಶಂಕೆಗೆ ಅವಕಾಶ ಆಗುತ್ತದೆ. ಇವರ ಬಗ್ಗೆ ಮಾನವೀಯ ದೃಷ್ಟಿಯನ್ನು ತೋರಿಸಿದ್ದು ಅಷ್ಟು ಸರಿಯಾದುದಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ. ದಯವಿಟ್ಟು ಇಷ್ಟು ಹೇಳಬೇಕು. ಯಾವ ದಿವಸ ಆತನನ್ನು ಅಲ್ಲಿಗೆ ಕಳಿಸಿಕೊಟ್ಟರು? ಮುಖ್ಯಮಂತ್ರಿಗಳ ಆರ್ಡರ್ ೧೭–೫–೧೯೮೮ಕ್ಕೆ ಆಯಿತೆಂದು ಹೇಳುತ್ತಿದ್ದಾರೆ. ೩–೫–೧೯೮೮ಕ್ಕೆ ಸರ್ಕಾರದ ಆರ್ಡರ್ ಆಗಿದೆ. ಈ ಮಧ್ಯ ಯಾವ ತಾರೀಕಿಗೆ ಆತನನ್ನು ಇಲ್ಲಿಂದ ಅಸ್ಸಾಮಿಗೆ ಕಳಿಸಿಕೊಟ್ಟಿದ್ದಾರೆ ಎಂದು ದಯವಿಟ್ಟು ತಿಳಿಸಬೇಕು.

೧೨–೦೦ ಮಧ್ಯಹ್ನ

ಶ್ರೀ ವೀರಣ್ಣ.—ಈ ವಿಷಯದಲ್ಲಿ ಕ್ಲೀನ್ ಆಗಿ ಉತ್ತರದಲ್ಲಿಯೇ ಹೇಳಿದ್ದೇನೆ.

"ಬಳ್ಳಾಡಳಿತ ಕಾರ್ಯದರ್ಶಿ, ದೆಹಲಿ ಆಡಳಿತ, ದೆಹಲಿಯವರು ತಮ್ಮ ಟೆಲಿಕ್ಸ್ ಮೆಸೇಜ್ ದಿನಾಂಕ : ೭–೫–೧೯೮೮ ರಂದು ವಿಚಾರಣಾಧೀನ ಖೈದಿಯನ್ನು ಬೆಂಗಳೂರಿನ ನಿಮ್ಹಾನ್ಸ್‌ನಿಂದ ಚಿಕಿತ್ಸೆಗಾಗಿ ಪೋಲೀಸ್ ಬಂದೋಬಸ್ತಿನಲ್ಲಿ ಏರ್ಪಾಯಿಸಲು ಅನುಮತಿ ಕೊಟ್ಟಿರುತ್ತಾರೆ. ವಿಚಾರಣಾಧೀನ ಖೈದಿ ದೇವಜ್ಯೋತಿ ಬರೂವನನ್ನು ತಾರೀಖಿಂ : ೧೬–೫–೧೯೮೮/೧೭–೫–೧೯೮೮ ರಂದು ಪೋಲೀಸ್ ಬಂದೋಬಸ್ತಿನೊಂದಿಗೆ ದೆಹಲಿಗೆ ಕಳುಹಿಸಿರುವ ಬಗ್ಗೆ ವರದಿ ಬಂದಿರುತ್ತದೆ."

ಈ ರೀತಿಯಾಗಿ ದೆಹಲಿಗೆ ಕಳುಹಿಸಿರುವ ಬಗ್ಗೆ ವರದಿ ಬಂದಿದೆ.

ಗೋಕರ್ಣದಲ್ಲಿ ಅಷ್ಟಬಂಧ ಕಾರ್ಯಕ್ರಮ ನಡೆದಾಗ, ಖರ್ಚು ವೆಚ್ಚ ಮಾಡಿದ ವಿವರಗಳನ್ನು ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ನೀಡದಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಗೋಕರ್ಣದಲ್ಲಿ ಅಷ್ಟಬಂಧ ಕಾರ್ಯಕ್ರಮ ನಡೆದಾಗ ಖರ್ಚು ವೆಚ್ಚ ಮಾಡಿದ ವಿವರಗಳನ್ನು ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ನೀಡದಿರುವ ಬಗ್ಗೆ ಮತ್ತು ಈ ಬಾಬಿಗೆ ಎನ್.ಆರ್.ಇ.ಪಿ, ಹಣವನ್ನು ಖರ್ಚು ಮಾಡಿದ ಬಗ್ಗೆ ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಟಿ ಜಮೀನು ಅಭಿವೃದ್ಧಿ ರಾಜ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಅಮರನಾಥ ಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ಮತ್ತು ಮಾರುಕಟ್ಟೆ ಮತ್ತು ಖಿಷ್ಟಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನವು ದೇಶದಲ್ಲಿ ಬಹಳ ಪ್ರಸಿದ್ಧಿಯಾಗಿದ್ದು, ಬಹಳ ವರ್ಷಗಳಿಂದ ಇಲ್ಲಿ ಅಷ್ಟಬಂಧ ಕಾರ್ಯಕ್ರಮವು ನಡೆದಿಲ್ಲವಾದ್ದರಿಂದ ಅಷ್ಟಬಂಧ ಕಾರ್ಯಕ್ರಮವನ್ನು ೧೯ನೇ ಮೇ ೧೯೫ ರಿಂದ ೩೦ರ ತನಕ ನಡೆಸಲಾಯಿತು. ಈ ಅಷ್ಟಬಂಧ